ಸಂಖ್ಯೆ: ಎ3/ಸಿಆರ್-11/2005-06

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಮಂಗಳೂರು ವೃತ್ತ, "ಅರಣ್ಯ ಭವನ", ಅಳಪೆ, ಪಡೀಲು,
ಮಂಗಳೂರು-7, ದಿನಾಂಕ: 29-05-2020.

ಇವರಿಗೆ,

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂರಕ್ಷಣೆ),
ಅರಣ್ಯ ಭವನ,
ಮಲ್ಲೇಶ್ವರಂ, 18ನೇ ಅಡ್ಡರಸ್ತೆ,
ಬೆಂಗಳೂರು-560003.

ಮಾನ್ಯರೇ,

ವಿಷಯ: Diversion of 0.80 ha. of Reserved Forest land in Sy No. 125/P of Sampaje village, Sulya Taluk, Dakshina Kannada District, Mangalore Division for construction of 33/11 KV substation at Rajarampura in favour of the Executive Engineer (Elec), MESCOM, Puttur Division.

ಉಲ್ಲೇಖ:
1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ: Old file No. A5(2)GFL CR-42/ 16-17 E-Offile file No: KFD/HOFF/A5-2(GFL)/170/2019-FC, ದಿನಾಂಕ: 07/11.12.2019
2. ರಾಜ್ಯ ಸರ್ಕಾರದ ಪತ್ರ ಸಂಖ್ಯೆ: ಅಪಜೀ.06/ಎಫ್ಎಲ್ಎಲ್.2020(ಇ). ದಿನಾಂಕ: 07.02.2020.
3. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಬೆಂಗಳೂರು ಇವರ ಕಚೇರಿ ಪತ್ರ ಸಂಖ್ಯೆ: Old file No. A5(2)GFL.CR-42/16-17 E-Offile file No: KFD/HOFF/A5-2(GFL)/170/2019-FC, ದಿನಾಂಕ: 07.03.2020.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಮೆಸ್ಕಾಂ) ಉಪ ವಿಭಾಗ ಸುಳ್ಯ ಇವರ ಕಛೇರಿ ಪತ್ರ ಸಕಾಇಂ(ವಿ)/ಸ.ಇಂ(ತಾಂ)/ ಸುಳ್ಯ/19-20/3856-63, ದಿನಾಂಕ:18.03.2020.
5. ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರ ಕಚೇರಿ ಪತ್ರ ಸಂಖ್ಯೆ: ಭೂಶಾಖೆ/ಕೆ.ವಿ.ಸ್ಟೇಷನ್.11/2004-05, ದಿನಾಂಕ 20.05.2020.

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್), ಮೆಸ್ಕಂ, ಪುತ್ತೂರು ವಿಭಾಗ ಇವರು ಸುಳ್ಯ ತಾಲೂಕು ಸಂಪಾಜೆ ಗ್ರಾಮದ ರಾಜಾರಾಂಪುರ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 33/11 ಕೆ.ವಿ ವಿದ್ಯುತ್ ಉಪ ಕೇಂದ್ರಕ್ಕೆ 0.80 ಹೆ. ಅರಣ್ಯ ಜಮೀನಿನ ಅಗತ್ಯತೆ ಬಗ್ಗೆ ಸಮರ್ಥನೆ (Justification) ಹಾಗೂ ಅರಣ್ಯ ಜಮೀನಿನ ಬದಲಿಗೆ ಕನಿಷ್ಟ 03 ಪರ್ಯಾಯ ಜಮೀನುಗಳ ಲಭ್ಯತೆ ಬಗ್ಗೆ ಪರಿಶೀಲನೆ ನಡೆಸಿ ಅವುಗಳ fesibility ಬಗ್ಗೆ ವರದಿ ಸಲ್ಲಿಸಲು ಉಲ್ಲೇಖ(2)ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ. ಅದರಂತೆ ಉಪಯೋಗಿ ಸಂಸ್ಥೆಯಾದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಮೆಸ್ಕಾಂ) ಉಪ ವಿಭಾಗ, ಸುಳ್ಯ ಇವರು 0.80 ಹೆ. ಜಮೀನಿನ ಅಗತ್ಯತೆ ಬಗ್ಗೆ

(Justification) ಹಾಗೂ ಕೋರಿಕೆ ಇಡಲಾಗಿರುವ ಅರಣ್ಯದ ಜಮೀನಿನ ಬದಲಿಗೆ ಕನಿಷ್ಠ 03 ಪರ್ಯಾಯ ಜಮೀನುಗಳ ಲಭ್ಯತೆಯ ಬಗ್ಗೆ ಉಲ್ಲೇಖ(4)ರ ಪತ್ರದಲ್ಲಿ ಸಲ್ಲಿಸಿದ ವರದಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಉಲ್ಲೇಖ(5)ರ ಪತ್ರದಲ್ಲಿ ಈ ಕೆಳಗಿನಂತೆ ಸಲ್ಲಿಸಿರುತ್ತಾರೆ.

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 33/11 ಕೆ.ವಿ. ಸುಳ್ಯ ವಿದ್ಯುತ್ ಉಪಕೇಂದ್ರದಿಂದ ತೋಡಿಕಾನ, ಅರಂತೋಡು, ಸಂಪಾಜೆ, ಆಲೆಟ್ಟಿ, ಮರ್ಕಂಜ ಹಾಗೂ ಮಡಿಕೇರಿ ಗಡಿ ಪ್ರದೇಶಗಳಾದ ಚೆಂಬು, ಕೊಯನಾಡು ಮತ್ತು ಇನ್ನಿತರ ಗ್ರಾಮಗಳಿಗೆ ವಿದ್ಯುತ್ ಪೂರೈಕೆ ಮಾಡುತ್ತಿದ್ದು, ಸದ್ರಿ ಉಪಕೇಂದ್ರವು ಮೇಲೆ ಹೇಳಲಾದ ಗ್ರಾಮಗಳಿಂದ ಸುಮಾರು 30-40 ಕಿ.ಮೀ. ದೂರದಲ್ಲಿರುತ್ತದೆ. ಅಲ್ಲಿಂದ ವಿದ್ಯುತ್ ಜಾಲ ನಿರ್ಮಿಸಿ ವಿದ್ಯುತ್ ಸರಬರಾಜು ಮಾಡುತ್ತಿರುವುದರಿಂದ ಲೋ-ವೋಲ್ಟೇಜ್‌ನಂತಹ ಸಮಸ್ಯೆಗಳಾಗಿ ವಿದ್ಯುತ್ ಪೂರಕೆಯಲ್ಲಿ ವ್ಯತ್ಯಯವಾಗುತ್ತಿರುವುದು ಸ್ಥಳೀಯ ಗ್ರಾಮಸ್ಥರಿಂದ ತಿಳಿದುಬಂದಿರುತ್ತದೆ ಈ ಸಮಸ್ಯೆಯನ್ನು ಸರಿದೂಗಿಸುವ ಸಲುವಾಗಿ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಸುಳ್ಯದಿಂದ ಸುಮಾರು 14 ಕಿ.ಮೀ.ದೂರದಲ್ಲಿರುವ ರಾಜಾರಾಂಪುರ ಎಂಬ ಪ್ರದೇಶದಲ್ಲಿ ಮತ್ತೊಂದು 33/11 ಕೆ.ವಿ.ವಿದ್ಯುತ್ ಉಪಕೇಂದ್ರ ನಿರ್ಮಾಣ ಮಾಡಿ ಸ್ಥಳೀಯ ಗ್ರಾಮಗಳಿಗೆ 11 ಕೆ.ವಿ. ಫೀಡರ್‌ಗಳ ಮೂಲಕ ವಿದ್ಯುತ್ ಸರಬರಾಜು ಮಾಡಲು ಪ್ರಸ್ತಾವಿತ ಸ್ಥಳದ ಅಗತ್ಯತೆಯು ಕಂಡುಬಂದಿರುತ್ತದೆ.

ಮುದುವರಿದು ವಿದ್ಯುತ್ ಉಪಕೇಂದ್ರದ ಸ್ಥಾಪನೆಗೆ ಸೂಚಿಸಲಾದ 03 ಪರ್ಯಾಯ ಸ್ಥಳಗಳನ್ನು ಪರಿಶೀಲನೆ ನಡೆಸಲಾಗಿ ಪ್ರಥಮ ಜಮೀನು ಸಂಪಾಜೆ ಗ್ರಾಮದ ಕಲ್ಲುಗುಂಡಿ, 2ನೇ ಜಮೀನು ಸಂಪಾಜೆ ಗ್ರಾಮದ ಕಡೆಪಾಲ-ಬಂಟೋಡಿ ಹಾಗೂ 3ನೇ ಜಮೀನು ಸಂಪಾಜೆ ಗ್ರಾಮದ ನೆಲ್ಲಿಕುಮೇರಿ ಎಂಬಲ್ಲಿ ಗುರುತಿಸಿದ ಪ್ರದೇಶಗಳಾಗಿದ್ದು, ಮೇಲೆ ಹೇಳಲಾದ ಪ್ರದೇಶಗಳಲ್ಲಿ ವಿದ್ಯುತ್ ಉಪಕೇಂದ್ರ ಸ್ಥಾಪಿಸಬೇಕಾದಲ್ಲಿ 5 ರಿಂದ 6 ಕಿ.ಮೀ. ಹೊಸದಾಗಿ (Heavy) ವಿದ್ಯುತ್ ಜಾಲ ನಿರ್ಮಿಸಬೇಕಾದ ಅಗತ್ಯವಿರುತ್ತದೆ. ಅಲ್ಲದೆ ವಿದ್ಯುತ್ ತಂತಿ ಎಳೆಯುವ ಪ್ರದೇಶವು ಹಾಗೂ ಉಪಕೇಂದ್ರ ಸ್ಥಾಪಿಸಲು ಉದ್ದೇಶಿಸಿರುವ ಪ್ರದೇಶವು ಮೀಸಲು ಅರಣ್ಯದ ಒಳಗಡೆ ಬರುತ್ತಿದ್ದು, ರಾಷ್ಟ್ರೀಯ ಹೆದ್ದಾರಿ ಮಾಣಿ-ಮೈಸೂರು ರಸ್ತೆಯಿಂದ ಸುಮಾರು 700 ರಿಂದ 800 ಮೀಟರನಷ್ಟು ಒಳಗಡೆ ಇರುತ್ತದೆ. ಆದ್ದರಿಂದ ವಿದ್ಯುತ್ ಜಾಲಕ್ಕಾಗಿ ಹೆಚ್ಚಿನ ಅರಣ್ಯ ಪ್ರದೇಶ ಮತ್ತು ಮರಗಳನ್ನು ಕಡಿಯುವ ಅವಶ್ಯಕತೆ ಕಂಡುಬಂದಿರುತ್ತದೆ. ಅಲ್ಲದೆ ಸದ್ರಿ ವಿಷಯವನ್ನು ಸೂಕ್ತ ಪ್ರಾಧಿಕಾರಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಿ ಕಾರ್ಯಗತಗೊಳಿಸಲು ಹೆಚ್ಚಿನ ಸಮಯ ತಗಲಬಹುದಾಗಿರುತ್ತದೆ. ಆದ್ದರಿಂದ ರಾಜಾರಾಂಪುರ ಪ್ರದೇಶದಿಂದ ವಿದ್ಯುತ್ ಜಾಲಗಳನ್ನು ಎಳೆಯಲು ಹೆಚ್ಚಿನ ಅನುಕೂಲವಿದ್ದು, ಸದ್ರಿ ಪ್ರದೇಶವು ರಾಷ್ಟ್ರೀಯ ಹೆದ್ದಾರಿ ಮಾಣಿ-ಮೈಸೂರು ರಸ್ತೆಯ ಪಕ್ಕದಲ್ಲಿರುತ್ತದೆ. ಆದುದರಿಂದ ರಾಜಾರಾಂಪುರ ಪ್ರದೇಶದಲ್ಲಿ ಸಬ್‌ಸ್ಟೇಷನ್ ನಿರ್ಮಿಸುವುದು ಸೂಕ್ತವೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರು ವರದಿಸಿರುತ್ತಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಗಳೂರು ವಿಭಾಗ, ಮಂಗಳೂರು ಇವರ ಉಲ್ಲೇಖ(5)ರ ಪತ್ರದ ಪ್ರತಿ ಹಾಗೂ ಅಡಕಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಅವಗಾಹನೆಗೆ ಮಂಡಿಸಿದೆ.

ತಮ್ಮ ನಂಬುಗೆಯ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಮಂಗಳೂರು ವೃತ್ತ, ಮಂಗಳೂರು.